ನಾನು ಕೇಳಿಕೊಳ್ಳತಕ್ಕಂಥದ್ದು ತಾವು ರಿಕ್ರೂಟಮೆಂಟ್ ಮಾಡಿ. ಟ್ರೈನಿಂಗ್ ಕಳುಹಿಸಿ like T.C.H., B.Edಗೆ ಏನು ಮಾಡುತ್ತೀರಿ ಹಾಗೆ.

ಶ್ರೀ ಆರ್.ಎಲ್. ಜಾಲಪ್ಪ : ಅದಕ್ಕೆ ಉತ್ತರ ಹೇಳಿದ್ದೇನೆ 300 ಅಥವಾ 400 ಅಥವಾ 500 ಜನ ಸಿಕ್ಕಬಹುದೆಂದು. ಅಲ್ಲಿ ಎಷ್ಟು ಜನ ಪರಿಶಿಷ್ಟ ವರ್ಗದವರು ಸಿಗುತ್ತಾರೆ, ಉಳಿದಿದ್ದನ್ನು ಬೇರೆಯವರಿಂದ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಪದೇ ಪದೇ ಪರಿಶಿಷ್ಟ ಜಾತಿ ಪರಿಶಿಷ್ಟ ಜಾತಿ ಎಂದರೆ ಹೇಗೆ? ರೋಸ್ಟರ್ ಎಂದು ನೀವು ಬರುತ್ತೀರಿ ಅದರಲ್ಲಿ ಎ.ಬಿ.ಸಿ.ಡಿ. Why you are telling only SC/STs? ನನಗೆ ಕೆಲವು ಜನರಿಗೆ ನೋಡಿದರೆ ಅಲರ್ಜಿ ಇದೆ. ಏನಾದರೂ ಪ್ರಶ್ನೆ ಕೇಳಿದರೆ ಇದು ಏನೂ ಎಸ್.ಸಿ.ಗೆ ಸಂಬಂಧಪಟ್ಟ ಹಾಗೆ ಎಂದು ತಿಳಿದುಕೊಳ್ಳುತ್ತಾರೆ. ರೋಸ್ಟರ್ ಮೀನ್ಸ ನೀವೂ ಬರುತ್ತೀರಿ, ಬೇರೆಯವರೂ ಬರುತ್ತಾರೆ, ಎಲ್ಲರಿಗೂ ರೋಸ್ಟರ್ ಸಿಸ್ಟಮ್ ಪ್ರಕಾರ ಎಂದು ಕೇಳುತ್ತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಆಗಬಹುದು. ಇನ್ನು 800 ಅಥವಾ 900 ಎಷ್ಟು ಜನ ಟ್ರೈನಿಂಗ್ ಆಗದೇ ಇರುವವರು ಇರುತ್ತಾರೆ ಅವರಿಗೆ ಮ್ಯಾಥೆಮ್ಯಾಟಿಕ್ಸ ಇದ್ದೇ ಇರಬೇಕೆಂದು ನಾವು ಪ್ರಿಸ್ಕೈಬ್ ಮಾಡುತ್ತಿದ್ದೇವೆ. ಅದು ಇದ್ದವರನ್ನು ತೆಗೆದುಕೊಂಡು ಆಮೇಲೆ ಅವರಿಗೆ ಟ್ರೈನಿಂಗ್ ಕೊಡುತ್ತೇವೆ.

ಪುತ್ತೂರು ತಾಲ್ಲೂಕಿನ ಕೃಷಿ ಉತ್ಪನ್ನಗಳ ಮಾರುಕಟ್ಟೆ ಪ್ರಾಂಗಣದ ಕಾರ್ಯಸ್ಥಗಿತ

317 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣ ಈ ತನಕ ಕಾರ್ಯರಂಭಿಸದಿರಲು ಕಾರಣಗಳೇನು;

ಆ) ಕೃಷಿ ಉತ್ಪನ್ನಗಳ ಮಾರಾಟವನ್ನು ಯಾವಾಗ ಈ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಪುತ್ತೂರು ಮಾರುಕಟ್ಟೆಯು ಇತ್ತೀಚೆಗೆ ಮಂಗಳೂರು ಮಾರುಕಟ್ಟೆಯಿಂದ ವಿಭಜಿಸಿಗೊಂಡು ಸ್ವತಂತ್ರ ಮಾರುಕಟ್ಟೆಯಾಗಿ ಈ ಪ್ರಾಂಗಣದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ದಿಸೆಯಲ್ಲಿ ಕಾರ್ಯರಂಭವಾಗಲು ವಿಳಂಬವಾಗಿದೆ.

ಆ) ಈಗಾಗಲೇ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಶೀಘ್ರದಲ್ಲಿಯೇ ವ್ಯಾಪಾರ ವಹಿವಾಟನ್ನು ನೂತನ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ.ವಿ. ಸದಾನಂದಗೌಡ : ಸನ್ಮಾನ್ಯ ಅಧ್ಯಕ್ಷರೇ, ನಾನು ಪುತ್ತೂರು ತಾಲ್ಲೂಕಿನ ಕೃಷಿ ಮಾರುಕಟ್ಟೆ ಪ್ರಾಂಗಣವನ್ನು ಈ ತನಕ ಕಾರ್ಯಾರಂಭಿಸದಿರಲು ಕಾರಣಗಳೇನು ಎಂದು ಕೇಳಿದ್ದೆ.

ಉತ್ತರ ಏನು ಕೊಟ್ಟಿದ್ದಾರೆಂದರೆ ಮಂಗಳೂರಿನಿಂದ ಅದು ವಿಭಜನೆಗೊಂಡ ಕಾರಣ ಹಾಗೂ ಅದಕ್ಕೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ದಿಸೆಯಲ್ಲಿ ಕಾರ್ಯಾರಂಭವಾಗಲು ವಿಳಂಬವಾಗಿದೆ; ಎಂದು ನನಗೆ ತಿಳಿದಮಟ್ಟಿಗೆ ಸುಮಾರು ನಾಲ್ಕು ವರ್ಷಗಳ ಹಿಂದೆ ಈ ಪ್ರಾಂಗಣ ಮಂಗಳೂರು ಮಾರುಕಟ್ಟೆ ಪ್ರಾಂಗಣಕ್ಕೆ ಸ್ಥಳಾಂತರಿಸಬೇಕು ಎಂದು ಇದ್ದರೂ ಕೂಡ ವರ್ತಕರ ಒತ್ತಡಕ್ಕೆ ಮಣಿದು ಸರ್ಕಾರ ಈ ಮಾರುಕಟ್ಟೆ ಯಾರ್ಡ್‌ನ್ನು ಸ್ಥಳಾಂತರಿಸದಿದ್ದದ್ದು ಸರಿಯೇ ಎಂದು ಹೇಳುವಂಥ ಒಂದು ಪ್ರಶ್ನೆ ಕೇಳುತ್ತಿದ್ದೇನೆ. ಎರಡನೆಯದಾಗಿ ಈ ಮಾರ್ಕೆಟ್ ಯಾರ್ಡ್‌ನಲ್ಲಿ ವ್ಯವಹಾರ ಮಾಡದ ಕಾರಣ ಲಕ್ಷಾಂತರ ರೂಪಾಯಿ ತೆರಿಗೆ ವಂಚನೆ ಆಗುತ್ತಿದೆ. ಈ ತೆರಿಗೆ ತಪ್ಪಿಸುವಂಥ ವ್ಯವಸ್ಥೆ ಸರ್ಕಾರಕ್ಕೆ ಗೊತ್ತಿದ್ದರೂ ಕೂಡ ಅದನ್ನು ಇನ್ನೂ ಕೂಡ ಮಾಡದೇ ಇರಲು ಕಾರಣವೇನು? ಮೂರನೆಯದಾಗಿ ನಾನು ನಿಶ್ಚಯವಾಗಿ ಕೇಳಿದ್ದೇನೆ. ಯಾವ ತಿಂಗಳು ಯಾವ ತಾರೀಖಿನಂದು ಈ ಪ್ರಾಂಗಣವನ್ನು ಶುರು ಮಾಡುತ್ತೀರೆಂದು. ಅದಕ್ಕೂ ಕೂಡ ನಿರ್ದಿಷ್ಟವಾದ ಉತ್ತರ ಇಲ್ಲ. ಈಗಾಗಲೇ ಮೂಲಭೂತ ಸೌಲಭ್ಯಗಳನ್ನು ಒಡಗಿಸಲಾಗಿದ್ದು ಶೀಘ್ರದಲ್ಲಿಯೇ ವ್ಯಾಪಾರ ವಹಿವಾಟನ್ನು ನೂತನ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ಮೂರು ಬಾರಿಯಾಯಿತು ಇದು. ಮಾರ್ಚನಲ್ಲಿ ಆಯಿತು. ಆಗಸ್ಟ್ 16ಕ್ಕೆ ಓಪನ್ ಮಾಡೋಣ ಎಂದು ಮಾನ್ಯ ಮಂತ್ರಿಗಳು ನನ್ನಲ್ಲೇ ಮುಕತಃ ಹೇಳಿದ್ದರು. ಅದರ ನಂತರ ಅಕ್ಟೋಬರ್ 20 ಹೇಳಿದರು. ಇನ್ನಾದರೂ ನಿಶ್ಚಿತ ದಿನಾಂಕವನ್ನು ಹೇಳಬೇಕು. ವರ್ತಕರ ಒತ್ತಡಕ್ಕೆ ಮಣಿಯವುದನ್ನು ನಿಲ್ಲಿಸಬೇಕೆಂದು ಅಗ್ರಹ ಮಾಡುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ : ಸನ್ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಸಮರ್ಪಕವಾಗಿ ಕೊಟ್ಟಿದ್ದೇವೆ. ನವೆಂಬರ್ 92ನೇ ಇಸವಿಯಲ್ಲಿ ಮಂಗಳೂರಿನಿಂದ ಈ ಎ.ಪಿ.ಎಂ.ಸಿ. ವಿಭಜನೆಗೊಂಡಿದೆ. ತದನಂತರ ಬೇಕಾದಂಥ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡತಕ್ಕಂಥದ್ದನ್ನೆಲ್ಲಾ ಮಾಡಿದ್ದೇವೆ. ಆದ ಒಂದು ಅಲ್ಲಿ ಸಂಪರ್ಕ ರಸ್ತೆ, ಲಿಂಕ್ ರಸ್ತೆ, ಎ.ಪಿ.ಎಂ.ಸಿ. ಸಂಬಂಧಿಸಿದ್ದು ಅವರು ದಾರಿಗೆ ಜಮೀನನ್ನು ಬಿಟ್ಟುಕೊಡಲು ಒಪ್ಪದೆ ಕೋರ್ಟಿಗೆ ಹೋದ್ದರಿಂದ ಸ್ವಲ್ಪದಿವಸ ತಡವಾಯಿತು. ಈಗಾಗಲೇ ಅದು ತೆರವಾಗಿದೆ. ಇನ್ನು ಒಂದು ಅಥವಾ ಎರಡು ತಿಂಗಳಲ್ಲಿ ಸ್ಥಳಾಂತರಿಸಲು ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ರಾಜಾ ವೆಂಕಟಪ್ಪ ನಾಯಕ್ ನಿಮ್ಮ ಪ್ರಶ್ನೆಗೆ ಸ್ವಲ್ಪ ಸಮಯ ಕೇಳಿದ್ದಾರೆ. ಉತ್ತರ ಬಂದಮೇಲೆ ಕಳುಹಿಸಿಕೊಡುತ್ತೇನೆ;

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಎರಡನೇ ಸಾರಿ ಅವರು ಕೇಳುತ್ತಿದ್ದಾರೆ. ಮುಖ್ಯವಾಗಿ ಅಲ್ಲಿ ಏನಾಗಿದೆ ಎಂದರೆ ಕೆನಾಲ್ ಬ್ರೀಚಾಗಿದೆ. ಪದೇ ಪದೇ ಅದೇ ಕೆನಾಲ್ ಬ್ರೀಚ್ ಆಗುತ್ತಿದೆ. ಮತ್ತು ಇಂಜಿನಿಯರ್ ಇನ್ ಚೀಫ್ ಅದಕ್ಕೆ ಯಾರೂ ಇಂಟ್ರೆಸ್ಟ್ ತೋರಿಸೆತ್ತಾ ಇಲ್ಲ.

ಅಧ್ಯಕ್ಷರು : ಎರಡು-ಮೂರು ದಿವಸದಲ್ಲಿ ಉತ್ತರ ತರಿಸಿಕೊಡುತ್ತೇನೆ.

ಗ್ರಾಮ ಲೆಕ್ಕಿಗರು ಸುಳ್ಳು ಖಾತೆ ಮಾಡುತ್ತಿರುವ ಬಗ್ಗೆ

318 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಿಗರು ಖಾತೆ ಬದಲಾವಣೆಯಲ್ಲಿ ಸುಳ್ಳು ಖಾತೆಗಳನ್ನು ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಹೊಸ ಕಾನೂನು ತರಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

1) ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.

2) ಭೂ ಕಂದಾಯ ಕಾಯಿದೆ 1964ರ ಕಲಂ 136 ಮತ್ತು ಭೂಕಂದಾಯ ನಿಯಮ 1966ರ ರೂಲ್ 63ರಿಂದ 70ರಡಿಯಲ್ಲಿ ಖಾತೆ ಬದಲಾವಣೆ ಮಾಡುವಾಗ ಅಥವಾ ನಿಯಮಾವಳಿಗಳನ್ನು ಬಿಟ್ಟು ಮಾಡಿದರೆ ಅದನ್ನು ತಡೆಗಟ್ಟುವ ಮತ್ತು ತೊಡದು ಹಾಕುವ ವಿಧಿ ವಿಧಾನಗಳು ಸ್ಪಷ್ಟವಾಗಿದೆ.

ಆದರೂ ಸಹ ಇದನ್ನು ಇನ್ನೂ ಪರಿಣಾಮಕಾರಿಯಾಗಿ ಜಾರಿಗೊಳಿಸಲು ಜಿಲ್ಲಾಧಿಕಾರಿಗಳಿಗೆ ಹಕ್ಕು ಕೊಡುವ ತಿದ್ದುಪಡಿಗಳನ್ನು ಕಲಂ 136ಕ್ಕೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಈ ಹಲವಾರು ಸುತ್ತೋಲೆಗಳ ಮೂಲಕ ಸುಳ್ಳು ಖಾತೆಗಳನ್ನು ಮಾಡದ ರೀತಿಯಲ್ಲಿ ಸರ್ಕಾರದಿಂದ ಫೀಲ್ಡ ಆಫೀಸರುಗಳಿಗೆ ಆದೇಶಗಳು ಜಾರಿಯಾಗವೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಇದು ಇತ್ತೀಚೆಗೆ ನಾಲ್ಕೈದು ವರ್ಷದಿಂದ ಸ್ವಲ್ಪ ಜಾಸ್ತಿಯಾಗಿದೆ. ಯಾರದೋ ಖಾತೆ ಯಾರದೋ ಹೆಸರಿಗೆ ಮಾಡುವುದು. ಅಥವಾ ಯಾರದೇ ಪಹಣಿಯನ್ನು ಯಾರದೋ ಹೆಸರಿಗೆ ಬರೆಯುವುದು. ಹೀಗೆಲ್ಲಾ ಮಾಡುತ್ತಿದ್ದಾರೆ. ನಮ್ಮ ಗಮನಕ್ಕೆ ಎಲ್ಲೆಲ್ಲಿ ಬಂದಿದೆ ಅಲ್ಲೆಲ್ಲಾ ಅವರನ್ನು ಸಸ್ಪೆಂಡ್ ಮಾಡಿ ಅವರ ಮೇಲೆ ಎನಕ್ವೆರಿಗೆ ಆರ್ಡರ್ ಮಾಡಿದ್ದೇವೆ. ಬರೀ ಸಸ್ಪೆಂಡ್ ಮಾಡುವುದು ಮತ್ತೆ ಆರು ತಿಂಗಳ ನಂತರ ಅವರನ್ನು ರೀ-ಇನಸ್ಟೇಟ್ ಮಾಡುವುದು it has become a mockery now. ಇದು ನನ್ನದೊಂದೇ ಇಲಾಖೆಯಲ್ಲಿ ಇಲ್ಲ. ಎಲ್ಲಾ ಇಲಾಖೆಯಲ್ಲಿ ಆಗುತ್ತಿದೆ. ಆರು ತಿಂಗಳು ಅವನಿಗೆ ಸಂಬಳ ಕೊಡುವುದಿಲ್ಲ. ಆರು ತಿಂಗಳೊಳಗೆ ಏನಕ್ವೊಯರಿ ಆಗುವುದಿಲ್ಲ. ಇದು ಒಂದು ಒಂದೂವರೆ ವರ್ಷ ತೆಗೆದುಕೊಳ್ಳುತ್ತದೆ. ಅಷ್ಟರವರೆಗೆ ಎಲ್ಲಾ ಮರೆತು ಹೋಗಿರುತ್ತದೆ. ಬುದ್ದಿವಂತರಿದ್ದವರು ಮ್ಯಾನ್ಯುಪಲೇಟ್ ಮಾಡಿ 2-3-5 ವರ್ಷ ಮುಂದೆ ಹಾಕಿಸುಕೊಳ್ಳತ್ತಿದ್ದಾರೆ. ಇದನ್ನೆಲ್ಲಾ ಯೋಚನೆ ಮಾಡಿ ಸೆಕ್ಷನ್ 135ಕ್ಕೆ ಒಂದು ಅಮೆಂಡಮೆಂಟೆ ತಂದು ಯಾರಿಗೆ ಅನ್ಯಾಯವಾಗುತ್ತದೆ ಅವರೇ ನೇರವಾಗಿ ಈ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಯಾಕೆ ಕ್ರಿಮಿನಲ್ ಕೇಸ್ ಹಾಕಬಾರದು, ಏಕೆ ನಾವು ಪ್ರಾವಿಷನ್ ಮಾಡಲುಬಾರದು ಎಂದು ಯೋಚನೆ ಮಾಡುತ್ತಿದ್ದೇವೆ. ಇದರ ಜೊತೆಗೆ ಈಗ ಏನಾಗಿದೆ ಡಿಸ್ಟ್ರಿಕ್ಟ್‌ವೈಸ್ ಈ ವಿಲೇಜ್